**ದಿನಾಂಕಃ 01-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ವಾಯ್. ಎನ್. ಎಲ್. ವಕೀಲರಿಂದಃ**

3. ನನ್ನ ಗಂಡ ತೀರಿಕೊಂಡು ಸುಮಾರು 30 ವರ್ಷಗಳು ಸಂಧಿವೆ. ನನ್ನ ಗಂಡ ತೀರಿಕೊಂಡ ನಂತರ ವಾರಸಾ ಮಾಡಿಕೊಳ್ಳವ ಸಮಯದಲ್ಲಿ ವಾದಿ ಅಪ್ರಾಪ್ತ ವಯಸ್ಸಿನವನಾಗಿದ್ದ ಎಂದರೆ ಸರಿ. ನಮ್ಮ ಮನೆತನದ ಮೂಲ ಸ್ವತ್ತು ಮುಳಗಡೆ ಆದ ಕಾರಣ ಕೃ.ಮೇ.ಯೋ ಅಡಿಯಲ್ಲಿ ದಾವಾ ಸ್ವತ್ತನ್ನು ಕುಟುಂಬದವರಿಗೆ ಮಂಜೂರು ಮಾಡಲಾಯಿತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾವಾ ಸ್ವತ್ತನ್ನು ಕೇವಲ ನನ್ನ ಗಂಡನಿಗೆ ಮಂಜೂರು ಮಾಡಲಾಗಿದೆ ಎಂದು ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸುಮಾರು 10-11 ವರ್ಷಗಳ ಹಿಂದೆ ನನಗೆ ನಿವೇಶನ ಸಂಖ್ಯೆ 3502 ನ್ನು ಮಂಜೂರು ಮಾಡಲಾಗಿದೆ ಎಂದರೆ ಸರಿ. ಅದೇ ರೀತಿ ನಿವೇಶನ ಸಂಖ್ಯೆ 3503 ನ್ನು ನನ್ನ ಇನೊಬ್ಬ ಮೈದುನ ಸಂಗಪ್ಪನಿಗೆ ಮಂಜೂರು ಮಾಡಲಾಗಿದೆ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ಮಾರಾಟ ಮಾಡುವ ಮುನ್ನ ಅಧಿಕಾರಿಗಳಿಂದ ಅನುಮತಿ ಪಡೆದಿದ್ದು, ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತಿನಲ್ಲಿ ವಾದಿಯೇ ಮಾಲೀಕನಾಗಿ ಸ್ವಾಧಿನಾನುಭೋಗದಲ್ಲಿ ಇದ್ದಾನೆ ಎಂದರೆ ಸರಿಯಲ್ಲ. ನಾನು ಇದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ನನ್ನ ಮತ್ತು ವಾದಿಯ ಹೆಸರಿನಲ್ಲಿ ಜಂಟಿಯಾಗಿದ್ದರು ಸಹ, ನಾನು ಮಂಜೂರು ಮಾಡುವ ಸಮಯದಲ್ಲಿ ಹಾಕಿದ ಷರತ್ತುಗಳನ್ನು ಉಲ್ಲಂಘಿಸಿ ಮಾರಾಟ ಮಾಡಿದ್ದೇನೆ ಎಂದರೆ ಸಾಕ್ಷಿಯು, ಅದು ನನ್ನ ಒಬ್ಬಳ ಸ್ವತ್ತು, ಆದ್ದರಿಂದ ಮಾರಾಟ ಮಾಡಿದ್ದೇನೆ ಎಂದು ನುಡಿಯುತ್ತಾರೆ.

6. ದಾವಾ ಸ್ವತ್ತಿನ ಚಕ್ಕಬಂದಿ ಪೂರ್ವಕ್ಕೆ ವಾದಿಯ ನಿವೇಶನ, ಪಶ್ಚಿಮ ಲಕ್ಷ್ಮೀಬಾಯಿ ನಿವೇಶನ, ದಕ್ಷಿಣಕ್ಕೆ ಬಳೂತಿರವರ ನಿವೇಶನ, ಉತ್ತರಕ್ಕೆ ಕೊಟಾರಿರವರ ನಿವೇಶನ ಇರುತ್ತವೆ. ನನ್ನ ಪಾಲಿಗೆ ಬಂದ ನಿವೇಶನವನ್ನು ಮಾರಿ, ಈಗ ವಾದಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**